

بِسْمِ اللّٰہِ الرَّحْمٰنِ الرَّحِیْمِ

# ಜರ್ಮನ್ ಜಲ್ಸ – ಅಲ್ಲಾಹನ ಅನುಗ್ರಹಗಳ ಸ್ಮರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **01–09–2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನು ತನ್ನ ಅನುಗ್ರಹದಿಂದ ಎಂ.ಟಿ.ಎ. ಮೂಲಕ ಅಹ್ಮದಿಯಾ ಲೋಕವನ್ನು ಒಗ್ಗೂಡಿಸಿ ಅವರು ಜಮಾಅತಿನ ಸಮಾಚಾರಗಳನ್ನು ತಕ್ಷಣ ತಿಳಿದುಕೊಳ್ಳುವ ವ್ಯವಸ್ಥೆ ಒದಗಿಸಿದ್ದಾನೆ. ಆಯಾಕಾಲದ ಖಲೀಫರ ಪ್ರವಾಸಗಳ ಬಗ್ಗೆ ಮತ್ತು ಜಮಾಅತಿನ ವಿವಿಧ ಕಾರ್ಯಕ್ರಮಗಳ ಬಗ್ಗೆ ತಿಳಿಯಲು ದೀರ್ಘಕಾಲ ಕಾಯುವ ಆವಶ್ಯಕತೆಯಾಗಲಿ ಜಮಾಅತಿನ ಪತ್ರಿಕೆಗಳ ಆಗಮನವನ್ನು ಕಾಯುವ ಆವಶ್ಯಕತೆಯೂ ಈಗ ಇರುವುದಿಲ್ಲ. ಪ್ರತಿಯೊಂದು ಸಮಾಚಾರ ತಕ್ಷಣ ಜನರಿಗೆ ತಲಪುತ್ತಿದೆ.

ನೀವೆಲ್ಲರೂ ತಿಳಿದಿರುವ ಹಾಗೆ ಕಳೆದ ವಾರ ಜರ್ಮನಿಯ ಜಲ್ಸಸಾಲಾನ ಜರಗಿತು. ಅದರ ಬಗ್ಗೆ ನನಗೆ ಜನರು ಅಭಿಪ್ರಾಯ ಬರೆದು ತಿಳಿಸಿದ್ದಾರೆ. ನಾನು ಎಲ್ಲಿಗೆ ಸಂದರ್ಶನ ನೀಡಿದರೂ ಅಲ್ಲಿ ಜರಗಿದ ಕಾರ್ಯಕ್ರಮಗಳ ಬಗ್ಗೆ ಜನರು ಅಭಿಪ್ರಾಯ ಸೂಚಿಸುತ್ತಾರೆ. ಜನರು ವಿವಿಧ ರೀತಿಗಳಲ್ಲಿ ತಮ್ಮ ಭಾವನೆಗಳನ್ನು ಪ್ರಕಟಿಸುತ್ತಾರೆ. ಅಲ್ಲಾಹನು ನಮಗೆ ಎಂ.ಟಿ.ಎ. ಎಂಬ ಅನುಗ್ರಹ ನೀಡಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತನ್ನು ಒಗ್ಗೂಡಿಸಿ ಒಂದು ದಾರದಲ್ಲಿ ಪೋಣಿಸಿರುವ ಬಹಿರಂಗ ದೃಶ್ಯದ ಸುಂದರ ಚಿತ್ರವನ್ನು ತೋರಿಸಿಕೊಟ್ಟ ಬಗ್ಗೆ ಜನರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಿದ್ದಾರೆ. ಆದುದರಿಂದ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದರೊಂದಿಗೆ ಎಂ.ಟಿ.ಎ.ಗೆ ಸಂಬಂಧಿಸಿದ ಕಾರ್ಯಕರ್ತರಿಗೂ ಕೃತಜ್ಞತೆ ಅರ್ಪಿಸಬೇಕಾಗಿದೆ. ಅಲ್ಲಾಹನು ಈ ಎಲ್ಲ ಕಾರ್ಯಕರ್ತರಿಗೆ ಉತ್ತಮ ಪ್ರತಿಫಲ ನೀಡುವವನಾಗಲಿ.

ಇದೇ ರೀತಿ ಜಲ್ಸದ ವಿವಿಧ ವಿಭಾಗಗಳಲ್ಲಿ ಕೆಲಸಮಾಡುವ ಕಾರ್ಯಕರ್ತರಿದ್ದಾರೆ. ಅವರು ಜಲ್ಸದ ಸಂದರ್ಭದಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡುತ್ತಾರೆ. ಅವರೆಲ್ಲರೂ ಹಗಲು ರಾತ್ರಿ ಅತಿಥಿಗಳಿಗೆ ಸೇವೆ ಮಾಡುತ್ತಾರೆ. ಇಂತಹ ಸ್ವಯಂಸೇವಕರ ಸಂಖ್ಯೆ ಈಗ ಸಾವಿರಾರು ಆಗಿದೆ. ಅವರಲ್ಲಿ ಪುರುಷರು, ಮಹಿಳೆಯರು, ಯುವಕರು, ಯುವತಿಯರು, ಬಾಲಕರೂ, ಬಾಲಿಕೆಯರೂ ಸೇರಿದ್ದಾರೆ. ಅವರು ಎಂತಹ ಆತ್ಮೋತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆಂದರೆ ಅಂತಹ ದೃಶ್ಯ ಈಗಿನ ಕಾಲದಲ್ಲಿ ಅಹ್ಮದಿಯಾ ಜಮಾಅತಿನಲ್ಲಿ ಮಾತ್ರ ಕಾಣಿಸುತ್ತಿದೆ. ಜಲ್ಸದಲ್ಲಿ ಬಂದು ಸೇರಿದ ಎಲ್ಲರೂ ಈ ಸ್ವಯಂಸೇವಕರಿಗೆ ಕೃತಜ್ಞತೆ ಅರ್ಪಿಸಬೇಕು.

ಅದೇ ರೀತಿ ಜಲ್ಸದಲ್ಲಿ ಭಾಗವಹಿಸುವ ಅಹ್ಮದಿಯರು ಸಹ ಅತಿಥಿಗಳ ಮೇಲೆ ತಮ್ಮ ಉತ್ತಮ ವರ್ತನೆಯ ಕಾರಣ ಉತ್ತಮ ಪ್ರಭಾವ ಬೀರುತ್ತಾರೆ. ಅದರ ಬಗ್ಗೆ ಆ ಅತಿಥಿಗಳು ಅನಂತರ ತಮ್ಮ ಅಭಿಪ್ರಾಯ ಹೇಳುತ್ತಾರೆ. ವಿವಿಧ ದೇಶಗಳಿಂದ ಆಗಮಿಸಿದ ವಿಶಿಷ್ಟ ಅತಿಥಿಗಳ ಅಭಿಪ್ರಾಯಗಳಲ್ಲಿ ಕೆಲವನ್ನು ಈಗ ನಾನು ನಿಮ್ಮ ಮುಂದೆ ಇರಿಸುವೆನು. ಆ ಮೂಲಕ ಜಲ್ಸದಿಂದ ದೊರೆತ ಅನುಗ್ರಹಗಳ ಈ ಭಾಗ ಸಹ ನಮ್ಮ ಮುಂದೆ ಬಂದು ನಾವು ಅಲ್ಲಾಹನಿಗೆ ಇನ್ನಷ್ಟು ಹೆಚ್ಚು ಕೃತಜ್ಞತೆ ಅರ್ಪಿಸಲು ಸಂದರ್ಭ ಸಿಗುವುದಲ್ಲದೆ ನಮ್ಮ ಸ್ಥಿತಿಯನ್ನು ನಾವು ಇನ್ನಷ್ಟು ಉತ್ತಮಗೊಳಿಸಲು ಸಹಾಯಕವಾಗುವುದು.

ಜರ್ಮನ್ ಜಲ್ಸದಲ್ಲಿ ಭಾಗವಹಿಸಿದ, ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವ, ಒಬ್ಬ ಅರಬಿ ವಂಶಜರಾದ ಮುಸ್ಲಿಮ್ ಸ್ನೇಹಿತ ಖಾಲಿದ್ ಮಿಯಾದ್ ತನ್ನ ಅಭಿಪ್ರಾಯವನ್ನು ಹೀಗೆ ಪ್ರಕಟಪಡಿಸಿದರು: ನನ್ನ ಮುಸ್ಲಿಮೇತರರಾದ ಸ್ನೇಹಿತರು ಇಸ್ಲಾಮ್ ಬಗ್ಗೆ ಆಕ್ಷೇಪ ಮಾಡುವುದಾಗಿ ಆಲಿಸಿದಾಗಲೆಲ್ಲಾ ಮುಸ್ಲಿಮರ ಪರಸ್ಪರ ದ್ವೇಷ ಮತ್ತು ಜಗಳಗಳ ಕಾರಣ ನನಗೆ ಇಸ್ಲಾಮ್ ಪರವಾಗಿ ಪ್ರತಿರೋಧಿಸಲು ಸಾಧ್ಯವಾಗುತ್ತಿರಲಿಲ್ಲ. ಇಂದು ಜಲ್ಸದಲ್ಲಿ ಭಾಗವಹಿಸಿದಾಗ ಜಮಾಅತಿನ ಜನರು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಶಾಂತಿಯಿಂದಲೂ ಪ್ರೀತಿಯಿಂದಲೂ ವರ್ತಿಸುವುದನ್ನು ಕಂಡೆನು. ಜಮಾಅತಿನ ಜನರು ಖಲೀಫರ ಬಗ್ಗೆ ಹೊಂದಿದ ಪ್ರೀತಿ ಮತ್ತು ಅನುಸರಣೆಯ ದೃಶ್ಯಗಳನ್ನು ಕಂಡೆನು. ಅಭಿಮಾನದಿಂದ ನಾನು ತಲೆ ಎತ್ತಿದೆನು. ನಾನು ಎಂತಹ ಒಂದು ಮುಸ್ಲಿಮ್ ಜಮಾಅತನ್ನು ಕಣ್ಣಾರೆ ಕಂಡೆನೆಂದರೆ ಅದರ ಸದಸ್ಯರು ಶಾಂತಿಪ್ರಿಯರಾಗಿದ್ದಾರೆ. ಮತ್ತು ಅವರ ಸಭೆಗಳು ಸುವ್ಯವಸ್ಥೆಯಿಂದ ಭರಿತವಾಗಿದೆ. ನಾನು ನಿಮ್ಮ ಜಮಾಅತಿನ ಉದಾಹರಣೆಯನ್ನು ನನ್ನ ಮುಸ್ಲಿಮೇತರ ಸ್ನೇಹಿತರ ಮುಂದಿರಿಸಿ ಧೈರ್ಯದಿಂದ ಇಸ್ಲಾಮಿನ ಪರವಾಗಿ ಪ್ರತಿರೋಧಿಸುವೆನು.

ಒಬ್ಬ ಜರ್ಮನ್ ಸ್ನೇಹಿತ ಮಶಾಯಲ್ ಫೀಚರ್, ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಹೀಗೆ ಹೇಳಿದರು: ನಾನು ಈ ಜಲ್ಸಕ್ಕೆ ಬರುವ ಮೊದಲು ಪತ್ರಿಕೆಗಳಲ್ಲಿ, ಅಹ್ಮದಿಯರು ಶಾಂತಿಪ್ರಿಯರು ಎಂದು ಓದಿದ್ದೆ. ಆಗ ನಾನು ಯೋಚಿಸಿದೆ, ಶಾಂತಿಪ್ರಿಯರೆಂದು ಬೇರೆ ಜನರು ಸಹ ವಾದಿಸುತ್ತಾರೆಂದು. ಈಗ ನಾನು ಇಲ್ಲಿಗೆ ಬಂದು ಸ್ವತಃ ಕಣ್ಣಾರೆ ಕಂಡೆನು. ಇಷ್ಟು ದೊಡ್ಡ ಸಮಾವೇಶ ಎಷ್ಟು ಶಾಂತಮಯವಾಗಿದೆ ಎಂದರೆ ನನಗೆ ಅದನ್ನು ನೋಡಿ ಆಶ್ಚರ್ಯವಾಯಿತು. ಬೇರೆ ಕಡೆಗಳಲ್ಲಿ ಒಂದು ಐನೂರು ಜನರು ಜಮಾಯಿಸಿದರೂ ಜಗಳಗಳು ತಲೆದೋರುತ್ತವೆ. ಈ ಜಲ್ಸಕ್ಕೆ ಬಂದು ಇಲ್ಲಿನ ಶಾಂತಿಭರಿತ ಪರಿಸರವನ್ನು ಕಂಡು ನೀವು ಶಾಂತಿ ಪ್ರಿಯರೆಂಬ ನಿಮ್ಮ ವಾದವನ್ನು ನಾನು ಪುಷ್ಟೀಕರಿಸುತ್ತೇನೆ.

ದಕ್ಷಿಣ ಅಮೇರಿಕ ಮೂಲದ ಓರ್ವ ಮಹಿಳೆ, ಮಾರಿಯಾ ಜೋಡೆ ಹೀಗೆ ಹೇಳಿದರು: ಇಲ್ಲಿಗೆ ಆಗಮಿಸಿದಾಗ ನನಗೆ ಬಹಳ ಆಶ್ಚರ್ಯವಾಯಿತು. ಎಷ್ಟೆಲ್ಲಾ ಜನಾಂಗಗಳ, ವಂಶಗಳ,

ವರ್ಣಗಳ ಜನರು ಐಕ್ಯದಿಂದ ಇಲ್ಲಿ ಒಟ್ಟಿಗೆ ಸೇರಿದ್ದಾರೆ. ಎಲ್ಲ ಕಡೆಗಳಲ್ಲೂ ಶಾಂತಿ ಮತ್ತು ಸಮಾಧಾನದ ವಾತಾವರಣವಿದೆ. ಎಲ್ಲರೂ ಸಮಾಧಾನ ಚಿತ್ತರಾಗಿದ್ದಾರೆ. ಯಾವುದೇ ಭಯವಿಲ್ಲ. ಇಂತಹ ಶಾಂತಿ ಭರಿತ ಸಮ್ಮೇಳನದಲ್ಲಿ ಭಾಗವಹಿಸಿದುದು ನನಗೆ ಒಂದು ಹೊಸ ಅನುಭವವಾಗಿದೆ. ನಾನು ಬರ್ಲಿನ್‌ಗೆ ಮರಳಿ ಹೋಗಿ ಅಲ್ಲಿರುವ ಅಹ್ಮದಿಯಾ ಜಮಾಅತಿನ ಮಸ್‌ಜಿದನ್ನು ಸಂಪರ್ಕಿಸುವೆನು. ಮತ್ತು ಈ ಜಮಾಅತ್‌ನೊಂದಿಗೆ ನನ್ನ ಸಂಬಂಧವನ್ನು ಬಲಪಡಿಸುವೆನು. ನಿಮ್ಮೊಂದಿಗೆ ಸೇರಿಕೊಂಡಾಗ ನನಗೆ ಒಂದು ರೀತಿಯ ಹೃತ್ಪೂರ್ವಕ ಸಮಾಧಾನ ಲಭಿಸಿತು.

ಮೆಸಿಡೋನಿಯಾ ದೇಶದ ಒಂದು ಸಮಾಜ ಸೇವಾ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮೂವರು ಮಹಿಳೆಯರು ಜಲ್ಸಕ್ಕೆ ಆಗಮಿಸಿದ್ದರು. ಅವರಲ್ಲೊಬ್ಬಾಕೆ ಹೀಗೆ ಹೇಳಿದರು: ನಾವು ನಿಮ್ಮ ಸದಸ್ಯರ ಬಗ್ಗೆ, ನಿಮ್ಮ ಉಪದೇಶಗಳ ಬಗ್ಗೆ ಮತ್ತು ನಿಮ್ಮ ನಾಯಕತ್ವದ ಬಗ್ಗೆ ತಿಳಿದುಕೊಂಡಿದ್ದೇವೆ. ನಾವು ಮರಳಿ ಹೋಗಿ ನಮ್ಮ ದೇಶದ ಮುಸ್ಲಿಮರಿಗೆ ನಿಮ್ಮ ಜಮಾಅತ್ ಬಗ್ಗೆ ತಿಳಿಸಬೇಕೆಂದು ಯೋಚಿಸಿದ್ದೇವೆ. ಈ ಜಮಾಅತ್ ಮತ್ತು ಈ ಜಲ್ಸಗಳು ಇತರ ಮುಸ್ಲಿಮರಿಗೆ ಅನುಸರಿಸಲು ಯೋಗ್ಯವಾದ ಉದಾಹರಣೆಗಳಾಗಿವೆ. ಇಷ್ಟು ಶಾಂತಿಭರಿತ ಉಪದೇಶಗಳು ಮತ್ತು ಇಂತಹ ಸುಸಂಘಟಿತ ಜಮಾಅತ್ ಜಾಗತಿಕವಾಗಿ ಮುಸ್ಲಿಮರನ್ನು ಪ್ರತಿನಿಧೀಕರಿಸುವ ಅರ್ಹತೆ ಹೊಂದಿದೆ.

ಲೇಟಿವಿಯಾ ದೇಶದಿಂದ ಆಗಮಿಸಿದ ಜರ್ನಲಿಸ್ಟ್ ಮಹಿಳೆ ಆಗಸ್ಟಿನ್ ಹೇಳುತ್ತಾರೆ: ನಾನು ಕಳೆದ ಆರು ತಿಂಗಳಿಂದ ವಿವಿಧ ಮುಸ್ಲಿಮ್ ಪಂಗಡಗಳ ಬಗ್ಗೆ ಸಂಶೋಧನೆಯ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಅದಕ್ಕೆ ಸಂಬಂಧಿಸಿ ನಾನು ಇಸ್ತಾಂಬೂಲಿಗೆ ಸಹ ಹೋಗಿದ್ದೆನು. ಅಲ್ಲಿ ವಿವಿಧ ಪಂಗಡಗಳ ಜನರನ್ನು ಬೇಟಿಯಾದೆನು. ಆದರೆ ಇಲ್ಲಿ ಅಹ್ಮದಿಯಾ ಜಮಾಅತಿನ ಇಮಾಮರನ್ನು ಭೇಟಿಯಾದಾಗ ನನ್ನ ಹೃದಯದಲ್ಲಿ ಉಂಟಾದ ಭಾವನೆಗಳನ್ನು ವಿವರಿಸಲು ನನ್ನಲ್ಲಿ ಶಬ್ದಗಳಿಲ್ಲ. ಲೇಟಿವಿಯಾದ ಕುರ್ತುಬ ಯುನಿವರ್ಸಿಟಿಯ ಪ್ರೊಫೆಸರ್ ಮಹಿಳೆ ಲೂಲಿಡಯಾಸ್ ಜಲ್ಸದಲ್ಲಿ ಭಾಗವಹಿಸಿ ತನ್ನ ಅಭಿಪ್ರಾಯವಾಗಿ ಹೀಗೆ ಬರೆದಿದ್ದಾರೆ: ನಾನು ನನ್ನ ಜೀವಿತದಲ್ಲಿ ಮೊದಲನೆಯ ಸಲ ಮುಸ್ಲಿಮರ ಇಷ್ಟು ದೊಡ್ಡ ಸಮ್ಮೇಳನದಲ್ಲಿ ಭಾಗವಹಿಸಿದೆನು. ಅಹ್ಮದಿಯಾ ಜಮಾಅತಿನ ಇಮಾಮರನ್ನು ಪ್ರಥಮವಾಗಿ ಸಮೀಪದಿಂದ ನೋಡಿದಾಗ ನನಗೆ ಅದ್ಭುತವಾದ ಒಂದು ಅನುಭವ ಅದಾಗಿತ್ತು. ಅದು ನನಗೆ ನನ್ನ ಜೀವಿತಾಂತ್ಯದ ವರೆಗೆ ನೆನಪಿನಲ್ಲಿರುವುದು.

ಈ ವರ್ಷ ಬೋಸ್ನಿಯಾದಿಂದ ನಲ್ವತ್ತಾರು ಜನರು ಆಗಮಿಸಿದ್ದರು. ಅವರಲ್ಲಿ ಹದಿನೆಂಟು ಜನರು ಅಹ್ಮದಿಯರಾಗಿದ್ದರು. ಉಳಿದ ಇಪ್ಪತ್ತೆಂಟು ಜನರಿಗೆ ತಬ್ಲೀಗ್ ಜಾರಿಯಲ್ಲಿತ್ತು. ಅವರ ಪೈಕಿ ಒಬ್ಬ ಮಹಿಳೆ ಯಾಸ್‌ಮೀನ್ ಸಾಹಿಬ ಹೇಳಿದರು: ಜಲ್ಸದ ಇಷ್ಟು ಬೃಹತ್ತಾದ ವ್ಯವಸ್ಥೆ ಕಂಡಾಗ ನನಗೆ ಆಶ್ಚರ್ಯವಾಯಿತು– ಇವರು ಎಂತಹ ಜನರೆಂದು. ಜಲ್ಸದ ಎಲ್ಲ ವ್ಯವಸ್ಥೆಗಳಲ್ಲಿ ನನಗೆ ಎಲ್ಲಿಯೂ ನ್ಯೂನತೆ ಕಂಡು ಬರಲಿಲ್ಲ. ಬೋಸ್ನಿಯಾದ ರೋಮನ್ ಸಮುದಾಯದವರಾದ ಓರ್ವ ಅತಿಥಿ ನಜಾತ್ ಸಾಹಿಬ್, ಅವರು ಬುದ್ಧಿಜೀವಿ ಎಂದು ಪ್ರಸಿದ್ಧರಾಗಿದ್ದಾರೆ, ಅವರು ನೌಡಲಾ ನಗರದ ಕೌನ್ಸಿಲರ್ ಸಹ ಆಗಿದ್ದಾರೆ, ಅವರು ಹೇಳುತ್ತಾರೆ: ಜಲ್ಸದ ವ್ಯವಸ್ಥೆ ಬಹಳ ಅತ್ಯುತ್ತಮವಾಗಿತ್ತು. ನಾನು ಇದರ ಮೊದಲು ಇಂತಹ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗವಹಿಸಿಲ್ಲ. ಈ ಜಲ್ಸ ನನಗೆ ವಿವಿಧ ರೀತಿಗಳಲ್ಲಿ ಪಾಠ ಕಲಿಸುವುದಾಗಿದೆ. ಕಾರ್ಯಕರ್ತರ ಸೇವೆಯ ನಿಷ್ಠೆಯನ್ನು ಕಂಡು ಅವರ ವಿಶ್ವಾಸ ಬಲಿಷ್ಠವಾಗಿದೆ ಎಂದು ನನಗೆ ಮನವರಿಕೆಯಾಯಿತು. ಅವರ ನಡೆ ನುಡಿಗಳಲ್ಲಿ ಸಮನ್ವಯತೆಯನ್ನು ನಾನು ಕಂಡೆನು. ಇದು ಅವರ ಅಭಿವೃದ್ಧಿಯ ರಹಸ್ಯವಾಗಿದೆ. ಅವರಲ್ಲಿ ಈ ಸ್ಥಿತಿ ಉಂಟಾಗಲು ಕಾರಣ ಅವರು ಖಿಲಾಫತ್‌ನೊಂದಿಗೆ ಹೊಂದಿದ ಸಂಬಂಧವಾಗಿದೆ.

ಒಬ್ಬ ಅಹ್ಮದಿಯೇತರ ಸ್ನೇಹಿತ ಮಾಹಿರ್ ಎಂಬವರು ತನ್ನ ಪತ್ನಿಯೊಂದಿಗೆ ತನ್ನ ಸ್ವಂತ ಖರ್ಚಿನಲ್ಲಿ ಜಲ್ಸಕ್ಕೆ ಆಗಮಿಸಿದ್ದರು. ಅವರು ಹೀಗೆ ಹೇಳಿದರು: ಇಲ್ಲಿ ಅತಿಥಿಗಳ ಬಗ್ಗೆ ಎಷ್ಟು ಲಕ್ಷ್ಯನೀಡಲಾಗುತ್ತಿದೆ ಮತ್ತು ಎಷ್ಟು ಪ್ರೀತಿಯಿಂದ ಅತಿಥಿಗಳನ್ನು ಕಾಣಲಾಗುತ್ತಿದೆ ಎಂದರೆ ಇಲ್ಲಿ ನಾವು ನೆಲದಲ್ಲಿ ಮಲಗಬೇಕೆಂದು ಅವರು ಆವಶ್ಯಪಟ್ಟರೂ ತಿನ್ನಲು ಬರೇ ಒಣ ರೊಟ್ಟಿಗಳನ್ನು ಕೊಟ್ಟರೂ ನಾವು ಅದರ ಬಗ್ಗೆ ಯಾವುದೇ ದೂರು ನೀಡಲಾರೆವು. ಏಕೆಂದರೆ ಇಲ್ಲಿ ನಮಗೆ ದೊರೆತ ಪ್ರೀತಿ ಮತ್ತು ವಾತ್ಸಲ್ಯದ ಉದಾಹರಣೆ ಬೇರೆ ಎಲ್ಲಿಯೂ ಕಾಣಿಸದು.

ಒಬ್ಬ ಅತಿಥಿಯಾದ ಅಮೀರ್ ಎಂಬವರು ಪ್ರಥಮ ಸಾರಿ ಜಲ್ಸಕ್ಕೆ ಆಗಮಿಸಿದ್ದರು. ಜಲ್ಸದ ವ್ಯವಸ್ಥೆ ಅವರ ಮೇಲೆ ಬಹಳ ಸಕಾರಾತ್ಮಕ ಪ್ರಭಾವ ಬೀರಿತು. ಅವರು ಹೇಳುತ್ತಾರೆ: ನಾನು ನನ್ನ ಹೃದಯದ ಭಾವನೆಗಳನ್ನು ವಿವರಿಸಲಾರೆ. ಇಲ್ಲಿನದನ್ನು ಅನುಭವಿಸಿಯೇ ಅರಿಯಬೇಕು. ಆದುದರಿಂದ ಪ್ರತಿಯೊಬ್ಬನು ಈ ಸ್ವರ್ಗ ಸದೃಶ ಪರಿಸರದಲ್ಲಿ ಕೆಲವು ದಿನಗಳ ಕಾಲ ಜೀವಿಸಿದರೆ ವಾಸ್ತವಿಕ ಸ್ವರ್ಗದ ಬಗ್ಗೆ ದೃಢ ವಿಶ್ವಾಸ ಲಭಿಸುವುದು.

ಈ ವರ್ಷ ಬಲ್ಗೇರಿಯಾ ದೇಶದಿಂದ ಐವತ್ತೆರಡು ಜನರ ಒಂದು ಪ್ರತಿನಿಧಿ ಸಂಘ ಆಗಮಿಸಿತ್ತು. ಅವರಲ್ಲಿ ಇಪ್ಪತ್ತು ಮಂದಿ ಅಹ್ಮದಿಯರಿದ್ದರು. ಉಳಿದವರು ಅಹ್ಮದಿಯೇತರರಾದ ಅತಿಥಿಗಳು. ಅವರಲ್ಲಿ ವಾಣಿಜ್ಯೋದ್ಯಮಿಗಳು, ವಕೀಲರು, ಉಪನ್ಯಾಸಕರು, ವಿದ್ಯಾರ್ಥಿಗಳೂ, ಸಾಮಾನ್ಯ ಜನರೂ ಇದ್ದರು. ಒಬ್ಬ ಮಹಿಳೆ ಐಸಿನೋ ವಾಸ್ ಹೇಳಿದರು: ಮನುಷ್ಯನು ತನ್ನ ಜೀವಿತದಲ್ಲಿ ಬದಲಾವಣೆ ಉಂಟುಮಾಡಲು ಬಯಸುವುದಾದರೆ ಜಲ್ಸಕ್ಕೆ ಬರಬೇಕು. ನಾನು ಇಲ್ಲಿ ಅನೇಕ ವಿಷಯಗಳನ್ನು ಕಲಿತುಕೊಂಡೆನು. ನಾನು ಎರಡು ವಿಷಯಗಳ ಬಗ್ಗೆ ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಒಂದನೆಯದಾಗಿ, ಇಲ್ಲಿ ಅಲ್ಲಾಹನನ್ನು ಪ್ರೀತಿಸುವ ಬಗ್ಗೆ ಕಲಿಸಲಾಗುತ್ತದೆ. ಎರಡನೆಯದಾಗಿ, ಇಲ್ಲಿ ಜನರು ಪರಸ್ಪರ ಪ್ರೀತಿಸಲು ಮತ್ತು ಗೌರವಿಸಲು ಕಲಿಸಲಾಗುತ್ತಿದೆ.

ಬಲ್ಗೇರಿಯಾದ ಒಬ್ಬ ಅತಿಥಿ ಫರ್ಫ್‌ಕ್ವಾನಿಲ್ ಸಾಹಿಬ್ ಹೇಳುತ್ತಾರೆ: ಅಹ್ಮದಿಯರು ಮಾತ್ರ ವಾಸ್ತವಿಕವಾಗಿ ಶಾಂತಿಯನ್ನು ಕಲಿಸುತ್ತಾರೆ. ಅನ್ಯರನ್ನು ಗೌರವಿಸುತ್ತಾರೆ ಮತ್ತು ಲೋಕವನ್ನು ಸ್ವರ್ಗವಾಗಿ ಮಾಡಲು ಇಚ್ಛಿಸುತ್ತಾರೆ. ಇಲ್ಲಿ

ಜೀವಿತದ ಪ್ರಕಾಶ ಸಿಗುತ್ತದೆ. ಅದು ಎಂತಹ ಪ್ರಕಾಶವೆಂದರೆ ಅದು ಮನುಷ್ಯನಿಗೆ ಜೀವಿತವನ್ನು ನೀಡುತ್ತದೆ. ಅಹ್ಮದಿಯ್ಯತ್ ಯಥಾರ್ಥ ಇಸ್ಲಾಂ ಆಗಿದೆ ಎಂದು ನಾನು ಜನರಿಗೆ ಹೇಳಿಕೊಡುತ್ತಾ ಜೀವಿಸುವೆನು. ಅಹ್ಮದಿಯತ್ ಲೋಕದಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನಿಸುತ್ತಿದೆ.

ಒಬ್ಬ ಕ್ರೈಸ್ತ ಮಹಿಳೆ ಹೇಳಿದರು: ಈ ಜಲ್ಸ ನಿಜವಾಗಿಯೂ ಒಂದು ಪವಾಡವಾಗಿದೆ. ಜುಮುಅದ ಖುತ್‌ಬ ನನ್ನ ಮೇಲೆ ಪ್ರಭಾವ ಬೀರಿತು. ಮನುಷ್ಯರನ್ನು ಪ್ರೀತಿಸುವ ಬಗ್ಗೆ, ತಪ್ಪುಗಳನ್ನು ಮರೆಮಾಡುವ ಬಗ್ಗೆ, ಒಬ್ಬರಿನ್ನೊಬ್ಬರಿಗೆ ಸಹಾಯ ಮಾಡುವ ಬಗ್ಗೆ, ಒಬ್ಬನ ತಪ್ಪು ಇನ್ನೊಬ್ಬನ ಮುಂದೆ ಹೇಳದಿರುವ ಬಗ್ಗೆ, ತಪ್ಪು ಮಾಡಿದವನ ಪರವಾಗಿ ಪ್ರಾರ್ಥಿಸುವ ಬಗ್ಗೆ ಖಲೀಫರು ನೀಡಿದ ಉಪದೇಶಗಳನ್ನು ಲೋಕದ ಜನರಲ್ಲರೂ ಆಲಿಸಿದ್ದರೆ ಎಷ್ಟು ಚೆನ್ನಾಗಿತ್ತು. ಲೋಕವು ನೇರಮಾರ್ಗದಲ್ಲಿರಲು ಬಯಸುವುದಾದರೆ ಈ ಎಲ್ಲ ಉಪದೇಶಗಳನ್ನು ಆಲಿಸಿ ಅನುಷ್ಠಾನಕ್ಕೆ ತರಬೇಕು.

ಮೆಸಿಡೋನಿಯದಿಂದ ಅರುವತ್ತೈದು ಜನರ ಒಂದು ಪ್ರತಿನಿಧಿ ಸಂಘ ಆಗಮಿಸಿತ್ತು. ಅವರ ಪೈಕಿ ವಿವಿಧ ಟೆಲಿವಿಷನ್ ಚ್ಯಾನಲ್‌ಗಳ ಐದು ಜರ್ನಲಿಸ್ಟರೂ ಇದ್ದರು. ಮೂವರು ವಿವಿಧ ಪ್ರಾದೇಶಿಕ ಟೆಲಿವಿಷನ್ ಚ್ಯಾನಲ್‌ಗಳಿಗೆ ಸೇರಿದವರಾಗಿದ್ದರು. ಒಬ್ಬರು ನ್ಯಾಶನಲ್ ಟೆಲಿವಿಷನ್‌ನವರಾಗಿದ್ದರು. ಅವರು ಜಲ್ಸದ ಕಾರ್ಯಕ್ರಮಗಳನ್ನು ರೆಕಾರ್ಡ್ ಮಾಡಿದರಲ್ಲದೆ ವಿವಿಧ ಜನರನ್ನು ಸಂದರ್ಶಿಸಿ ಅವರ ಹೇಳಿಕೆಗಳನ್ನು ದಾಖಲಿಸಿದರು. ಅಗಸ್ಟ್ ದಿನಾಂಕ 28ರಂದು ನನ್ನನ್ನು ಅವರು ಸಂದರ್ಶಿಸಿದರು. ಅವರು ಹೇಳಿದರು, ನಾವು ರಿಕಾರ್ಡ್ ಮಾಡಿದ ಕಾರ್ಯಕ್ರಮಗಳ ಒಂದು ಡೋಕ್ಯುಮೆಂಟರಿ ನಿರ್ಮಿಸಿ ಪ್ರಸಾರ ಮಾಡುವೆವು. ಮೆಸಿಡೋನಿಯಾದಿಂದ ಆಗಮಿಸಿದವರಲ್ಲಿ ಮೂವತ್ತೆರಡು ಕ್ರೈಸ್ತರೂ, ಇಪ್ಪತ್ತಮೂರು ಅಹ್ಮದಿಯರೂ ಹತ್ತು ಅಹ್ಮದಿಯೇತರ ಮುಸ್ಲಿಮರೂ ಇದ್ದರು. ಅವರಲ್ಲೊಬ್ಬರು ಜಲ್ಸದ ಕೊನೆಯ ದಿನ ಬೈಅತ್ ಮಾಡಿದರು.

ಮೆಸಿಡೋನಿಯಾದಿಂದ ಆಗಮಿಸಿದ ಒಬ್ಬ ಮಹಿಳೆ ಹೇಳಿದರು: ಖಲೀಫರ ಭಾಷಣಗಳು ನನ್ನ ಮೇಲೆ ಬಹಳ ಪ್ರಭಾವ ಬೀರಿವೆ. ಇಸ್ಲಾಮಿನ ಮುಖ್ಯ ಉದ್ದೇಶ ಶಾಂತಿಯಾಗಿದೆ ಯುದ್ಧವಲ್ಲ ಎಂದು ಖಲೀಫರ ಭಾಷಣಗಳಿಂದ ನನಗೆ ತಿಳಿಯಿತು. ನಾವು ಇಸ್ಲಾಮಿನ ಈ ಉಪದೇಶಗಳನ್ನು ಅನುಷ್ಠಾನಕ್ಕೆ ತರುವುದಾದರೆ ಲೋಕವು ಯುದ್ಧವಿಲ್ಲದೆ ಶಾಂತಿ ಮತ್ತು ಪ್ರೀತಿಯ ತೊಟ್ಟಿಲು ಆಗುವುದು. ಖಲೀಫರು ಮಹಿಳೆಯರ ಹಕ್ಕುಗಳ ಬಗ್ಗೆ ವಿವರಿಸಿದುದು ಬಹಳ ಉತ್ತಮ ಉಪದೇಶವಾಗಿದೆ. ಬೈಅತ್ ದೃಶ್ಯ ಸಹ ನನ್ನನ್ನು ಪ್ರಭಾವಿಸಿತು. ಸಮಯವೇ ಸ್ಥಗಿತಗೊಂಡಂತೆ ಭಾಸವಾಯಿತು. ಮೆಸಿಡೋನಿಯಾದಿಂದ ಆಗಮಿಸಿದ ಟೆಲಿವಿಷನ್ ಜರ್ನಲಿಸ್ಟ್ ಆಗಿರುವ ಮತ್ತೋರ್ವ ಮಹಿಳೆ ಹೇಳಿದರು: ಜಲ್ಸ ನನಗೆ ಇಸ್ಲಾಮಿನ ಹೊಸ ದಿಕ್ಕುಗಳ ಕಡೆಗೆ ಮಾರ್ಗದರ್ಶನ ನೀಡಿದೆ. ಒಂದು ಕಾಲದಲ್ಲಿ ಇಸ್ಲಾಮ್ ಎಂಬ ಹೆಸರು ನನಗೆ ನಿಷಿದ್ಧವಾಗಿತ್ತು. ಈಗ ನನಗೆ ಇಸ್ಲಾಮಿನ ಹೊಸ ಪರಿಚಯ ಲಭಿಸಿದೆ. ನನಗೆ ಈ ಹೊಸ ಅನುಭವ ಲಭಿಸಿದುದಕ್ಕೆ ನಾನು ಖಲೀಫರಿಗೆ ಕೃತಜ್ಞಳಾಗಿದ್ದೇನೆ. ಈ ಜರ್ನಲಿಸ್ಟ್ ನನ್ನ ಸಂದರ್ಶನ ಸಹ ಪಡೆದರು. ಅವರು ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರು ನೀಡಿದ ಎಲ್ಲಾ ಉತ್ತರಗಳು ಸಮಾಧಾನದಾಯಕವಾಗಿದ್ದವು. ನನಗೆ ಹೊಸದಿಗಂತದ ಕಡೆಗೆ ಮಾರ್ಗದರ್ಶನ ಲಭಿಸಿದೆ. ಈಗ ನಾನು ಇಸ್ಲಾಮಿನ ನೈಜ ಚಿತ್ರವನ್ನು ಕಂಡೆನು.

(ವಿವಿಧ ದೇಶಗಳಿಂದ ಆಗಮಿಸಿದ ಇನ್ನೂ ಕೆಲವು ಅತಿಥಿಗಳ ಅಭಿಪ್ರಾಯಗಳನ್ನು ವಿವರಿಸಿದ ನಂತರ ಹುಝೂರ್ ಹೇಳಿದರು): ಜರ್ಮನಿಯಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಬೈಅತ್ ಸಮಾರಂಭವೂ ಜರಗುತ್ತಿದೆ. ಈ ವರ್ಷ ಜಲ್ಸದ ಸಂದರ್ಭದಲ್ಲಿ ಹನ್ನೊಂದು ದೇಶಗಳ ಮೂವತ್ತಮೂರು ಜನರು ಬೈಅತ್ ಮಾಡಿದರು. ಅವರು ಅಲ್‌ಬೇನಿಯಾ, ಗ್ಯಾಂಬಿಯಾ, ಘಾನ, ಜರ್ಮನಿ, ಇರಾಕ್, ಯಮನ್, ಮೊರಾಕ್ಕೋ, ಫೆಲೆಸ್ತೀನ್, ಸಿರಿಯಾ, ತುರ್ಕಿ, ಲಿಥ್‌ವೇನಿಯಾ ದೇಶದವರಾಗಿದ್ದಾರೆ. ಈ ಜಲ್ಸಕ್ಕೆ ಸಂಬಂಧಿಸಿ ಜನರು ಪ್ರಕಟಿಸಿದ ಕೆಲವು ಅಭಿಪ್ರಾಯಗಳನ್ನು ಮಾತ್ರ ನಾನು ನಿಮ್ಮ ಮುಂದೆ ಇರಿಸಿದ್ದೇನೆ. ಅಲ್ಲಾಹನ ಅನುಗ್ರಹದಿಂದ ಜಲ್ಸ ಅನೇಕರ ಹೃದಯಗಳನ್ನು ತೆರೆಯುತ್ತದೆ. ಅನೇಕ ಜನರ ಸಂದೇಹಗಳು ದೂರ ಸರಿಸಲ್ಪಡುತ್ತವೆ. ಇಸ್ಲಾಮಿನ ವಾಸ್ತವಿಕ ಚಿತ್ರ ಜನರ ಮುಂದೆ ಪ್ರಕಟವಾಗುತ್ತದೆ. ಅಲ್ಲಾಹನು ಈ ಅನುಗ್ರಹಗಳನ್ನು ಯಾವಾಗಲೂ ಹರಡುತ್ತಾ ಇರಲಿ – ಆಮೀನ್.

ಮೀಡಿಯಾ ಕವರೇಜ್ ಬಗ್ಗೆ ಹೇಳುವುದಾದರೆ ಜಲ್ಸದ ಪ್ರಥಮ ದಿನ ಜುಮುಅ ನಮಾಝ್ ನಂತರ ಪ್ರೆಸ್ ಕಾನ್‌ಫರೆನ್ಸ್ ಇತ್ತು. ಅದರಲ್ಲಿ ನೇಶನಲ್ ಮತ್ತು ಇಂಟರ್ ನೇಶನಲ್ ಮೀಡಿಯಾದವರು ಭಾಗವಹಿಸಿದ್ದರು. ಇಂಟರ್‌ನೇಶನಲ್ ಮೀಡಿಯಾದಲ್ಲಿ ಇಟೆಲಿ, ಮೆಸಿಡೋನಿಯಾ, ಆಸ್ಟ್ರೇಯಾ, ಬ್ರೆಝಿಲ್ ಮತ್ತು ಬೆಲ್‌ಜಿಯಂ ದೇಶಗಳ ಟಿ.ವಿ. ಮತ್ತು ಪತ್ರಿಕೆಗಳ ಪ್ರತಿನಿಧಿಗಳು ಇದ್ದರು. ನೇಶನಲ್ ಲೆವಲ್‌ನಲ್ಲಿ ಜರ್ಮನಿಯ ನಾಲ್ಕು ಟಿ.ವಿ. ಸ್ಟೇಶನ್‌ಗಳ ಮತ್ತು ಮೂರು ಮುದ್ರಣ ಮೀಡಿಯಾಗಳ ಪ್ರತಿನಿಧಿಗಳಿದ್ದರು. ಲೋಕಲ್ ಮೀಡಿಯಾದ ಎನ್.ಟಿ.ವಿ.ಯ ಪ್ರತಿನಿಧಿ ಮತ್ತು ಒಂದು ರೇಡಿಯೋ ಸ್ಟೇಶನ್ ಮತ್ತು ನಾಲ್ಕು ಮುದ್ರಣ ಮಾಧ್ಯಮಗಳ ಪ್ರತಿನಿಧಿಗಳಿದ್ದರು.

ಒಟ್ಟಾರೆ ಹೇಳುವುದಾದರೆ ಜರ್ಮನಿಯ ಜಲ್ಸದ ಮೂರು ದಿನಗಳ ಕಾರ್ಯಕ್ರಮಗಳ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾದುವು. ದೊರೆತ ವರದಿಗಳ ಪ್ರಕಾರ ಐದು ಟಿ.ವಿ. ಚ್ಯಾನಲ್‌ಗಳ ಮೂಲಕ, ಮೂರು ರೇಡಿಯೋ ಚ್ಯಾನಲ್‌ಗಳ ಮೂಲಕ, ಅರುವತ್ತೊಂದು ಪತ್ರಿಕೆಗಳ ಮತ್ತು ಇತರ ಪ್ರಿಂಟ್ ಮಾಧ್ಯಮಗಳ ಮೂಲಕ ಐದು ಕೋಟಿ ತೊಂಬತ್ತೆರಡು ಲಕ್ಷ ಜನರಿಗೆ ಸಂದೇಶ ತಲಪಿದೆ. ಇಂಟರ್‌ನೇಶನಲ್ ಮೀಡಿಯಾ ಮೂಲಕ ಮುಂದಿನ ವಾರದೊಳಗೆ ನಾಲ್ಕು ಕೋಟಿ ಹದಿಮೂರು ಲಕ್ಷ ಜನರಿಗೆ ಸಂದೇಶ ತಲಪುವುದೆಂದು ಆ ಮೀಡಿಯಾ ಪ್ರತಿನಿಧಿಗಳು ಅಂದಾಜಿಸುತ್ತಾರೆ. ಅದೇರೀತಿ ಅಲ್ ಇಸ್ಲಾಮ್ ವೆಬ್ ಸೈಟ್‌ನಲ್ಲಿ ಜಲ್ಸದ ಕಾರ್ಯಕ್ರಮಗಳು ಜರ್ಮನಿಯ ಎಂ.ಟಿ.ಎ. ಸ್ಟುಡಿಯೋ ಸಹಾಯದಿಂದ ಅಪ್‌ಲೋಡ್ ಮಾಡಲಾಗುತ್ತಿತ್ತು. ಸೋಶಿಯಲ್ ಮೀಡಿಯಾದಲ್ಲಿ ಸಹ ಜಲ್ಸದ ಕಾರ್ಯಕ್ರಮಗಳು ಪ್ರಸಾರಗೊಂಡವು. ಫೇಸ್‌ಬುಕ್‌ನಲ್ಲಿ 32 ಪೋಸ್ಟ್‌ಗಳು

ಪ್ರಕಟವಾದುವು. ಅದನ್ನು ನಾಲ್ಕು ಲಕ್ಷದ ಇಪ್ಪತ್ತು ಸಾವಿರ ಜನರು ನೋಡಿದರು. 36 ಸಾವಿರ ಜನರು ಪೋಸ್ಟ್‌ಗಳನ್ನು ಲೈಕ್ ಮಾಡಿದರು. ಟ್ವಿಟರ್‌ನಲ್ಲಿಯೂ ಐದು ಲಕ್ಷದ ಮೂವತ್ತಾರು ಸಾವಿರ ಜನರು ಜಲ್ಸದ ಟ್ವೀಟ್ ನೋಡಿದರು. 5800 ಜನರು ರೀಟ್ವೀಟ್ ಮಾಡಿದರು.

ಅಲ್ಲಾಹನ ಅನುಗ್ರಹದಿಂದ ಜರ್ಮನಿಯ ಈ ಪ್ರವಾಸದ ಕಾಲದಲ್ಲಿ ಒಂದು ಮಸ್‌ಜಿದನ್ನು ಉದ್ಘಾಟನೆ ಮಾಡುವ ಭಾಗ್ಯ ಲಭಿಸಿತು. ಆ ಸಂದರ್ಭದಲ್ಲಿ ಭಾಗವಹಿಸಿದ ಜನರ ಮೇಲೆ ಉತ್ತಮ ಪ್ರಭಾವ ಉಂಟಾಯಿತು. ಅತಿಥಿಗಳು ಬಹಿರಂಗವಾಗಿ ಹೇಳಿದರು– ಈ ಇಸ್ಲಾಮ್ ಜರ್ಮನಿಯಲ್ಲಿ ಹರಡಬೇಕೆಂದು. ಮಸ್‌ಜಿದ್ ಉದ್ಘಾಟನೆಯ ಕಾರ್ಯಕ್ರಮ ಸಹ ಚೆನ್ನಾಗಿ ಪ್ರಸಾರಗೊಂಡಿತು. ಎರಡು ಟಿ.ವಿ. ಮತ್ತು ಎರಡು ಪತ್ರಿಕೆಗಳ ಪ್ರತಿನಿಧಿಗಳು ಈ ಸಮಾರಂಭಕ್ಕೆ ಆಗಮಿಸಿದ್ದರು. ಅವರ ಮೂಲಕ ಹದಿನಾರುವರೆ ಲಕ್ಷ ಜನರಿಗೆ ಇಸ್ಲಾಮಿನ ಸಂದೇಶ ತಲಪಿತು. ಅಲ್ಲಾಹನು ಜರ್ಮನಿಯ ಜಮಾಅತ್‌ಗೆ ಇದಕ್ಕಿಂತ ಹೆಚ್ಚು ಜನರಿಗೆ ಇಸ್ಲಾಮಿನ ಸಂದೇಶ ತಲಪಿಸುವ ಭಾಗ್ಯವನ್ನು ದಯಪಾಲಿಸಲಿ. ಇಸ್ಲಾಮಿನ ಬಗ್ಗೆ ಈಗ ಮಾಡಿಕೊಡಲಾದ ಪರಿಚಯ ಇನ್ನಷ್ಟು ವಿಶಾಲವಾಗಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 01-09-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon